

## 'ವಿಕ್ಟರಿ'ಎರಡನೇ ಲಹರಿ

ಐದು ವರ್ಷಗಳ ಹಿಂದೆ ತೆರೆಕಂಡಿದ್ದ ನಂದಕಿಶೋರ್ ನಿರ್ದೇಶನದ 'ವಿಕ್ಟರಿ' ನಟ ಶರಣ್ ಅವರ ತಾರಾವರ್ಚಸ್ಸು ಹೆಚ್ಚಿಸಿದ ಚಿತ್ರಗಳಲ್ಲೊಂದು. ಈಗ ಇದೇ ಹೆಸರಿನ ಎರಡನೇ ಭಾಗ ಸಿದ್ಧಗೊಳ್ಳುತ್ತಿದೆ. ಚಿತ್ರತಂಡದ ಬಹುತೇಕರು 'ವಿಕ್ಟರಿ 2'ರಲ್ಲಿದ್ದರೂ ನಿರ್ದೇಶಕರು ಮಾತ್ರ ಬೇರೆಯಾಗಿದ್ದಾರೆ. ಈ ಬಾರಿ ಆ್ಯಕ್ಷನ್–ಕಟ್ ಹೇಳುತ್ತಿರುವುದು ಹರಿ ಸಂತೋಷ್. ತರುಣ್ ಸುಧೀರ್ ಕಥೆಯನ್ನು ಅವರು ದೃಶ್ಯರೂಪಕ್ಕೆ ತಂದಿದ್ದಾರೆ.

'ವಿಕ್ಟರಿ 2' ಮೂಲಚಿತ್ರದ ಕಥೆಯ ಹಂದರದ ಚುಂಗು ಹಿಡಿದಿರುವ ಸಿನಿಮಾ. ಅಷ್ಟು ಮಾತ್ರವಲ್ಲ, ನಂದಕಿಶೋರ್ ಅವರಂತೆ ಹರಿ ಸಂತು ಕೂಡ ಕಾಮಿಡಿ ಸೂತ್ರವನ್ನೇ ನೆಚ್ಚಿದ್ದಾರೆ. ಶರಣ್ ಜೊತೆಗೆ ರವಿಶಂಕರ್ ಕೂಡ ಸಿಕ್ಕಾಪಟ್ಟೆ ನಗಿಸಲಿದ್ದಾರಂತೆ. ಇಬ್ಬರೂ ಸೀರೆ ಉಟ್ಟುಕೊಂಡು ಬಳಕುವ ಚಿತ್ರಗಳು–ದೃಶ್ಯಗಳು ಈಗಾಗಲೇ ಚಿತ್ರರಸಿಕರ ಗಮನಸೆಳೆದಿವೆ.

ನಾಯಕಿ ಅಸ್ಮಿತಾ ಸೂದ್ ಹಾಗೂ ಅಪೂರ್ವ ಅವರಿಗೆ ಚಿತ್ರಕ್ಕೆ ಗ್ಲಾಮರಸ್ ಟಚ್ ನೀಡುವ ಹೊಣೆಗಾರಿಕೆ. ಸಾಧು ಕೋಕಿಲಾ, ತಬಲಾ ನಾಣಿ, ಅವಿನಾಶ್, ಮಿತ್ರಾ ಸೇರಿದಂತೆ 'ವಿಕ್ಟರಿ'ಯ ನಗೆಬಳಗ ದೊಡ್ಡದಿದೆ.

ಇತ್ತೀಚೆಗಷ್ಟೇ ರಷ್ಯಾದಲ್ಲಿ 'ವಿಕ್ಟರಿ 2' ಚಿತ್ರದ ಗೀತೆಯೊಂದರ ಚಿತ್ರೀಕರಣ ನಡೆದಿದೆ. 'ಪ್ಲೀಸ್ ಟ್ರಸ್ಟು, ನಾನು ಚೀಪ್ ಅಂಡ್ ಬೆಸ್ಟು' ಎನ್ನುವ ಈ ಗೀತೆ ಸಿನಿಮಾದ ಹೈಲೈಟ್‌ಗಳಲ್ಲೊಂದಾಗಲಿದೆ ಎನ್ನುವುದು ಚಿತ್ರತಂಡದ ವಿಶ್ವಾಸ. ಈ ಗೀತೆಯಲ್ಲಿ ಯಕ್ಷಗಾನ, ಹುಲಿಕುಣಿತ ಸೇರಿದಂತೆ ಕರ್ನಾಟಕದ ವಿವಿಧ ಕಲಾಪ್ರಕಾರಗಳನ್ನು ತೋರಿಸುವ ಮೂಲಕ ರಷ್ಯಾದ ಕ್ಯಾನ್ವಾಸ್‌ನಲ್ಲಿ ಕನ್ನಡದ ರಂಗು ತುಂಬುವ ಪ್ರಯತ್ನ ನಡೆದಿದೆ. ಚಿತ್ರದ ಸಂಗೀತ ನಿರ್ದೇಶನ ಅರ್ಜುನ್ ಜನ್ಯ ಅವರದು.



## ಒಂದು ಗಂಡಿಗೊಂದು ಹೆಣ್ಣು...

ವಧುಪರೀಕ್ಷೆ ಸಾಮಾನ್ಯವಾಗಿ ಎಲ್ಲರ ಜೀವನದಲ್ಲೂ ಎದುರಾಗುವ ಒಂದು ಪ್ರಸಂಗ. ಕೆಲವು ಸಂದರ್ಭಗಳಲ್ಲಿ ಇದು ರಸಪ್ರಸಂಗವಾದರೆ, ಮತ್ತೆ ಕೆಲವು ಬಾರಿ ವಿಷಾದ ಪ್ರಸಂಗವಾಗುವುದೂ ಇದೆ. ಈ ವಧುಪರೀಕ್ಷೆಯ ಎಳೆಯನ್ನೇ ನಿರ್ದೇಶಕ ರಾಕೇಶ್ 'ಪತಿ ಬೇಕು.ಕಾಂ'ನಲ್ಲಿ ಚಿತ್ರಿಸಿದ್ದಾರೆ. ತೆರೆಗೆ ಸಿದ್ಧವಾಗಿರುವ 'ಪತಿಬೇಕು.ಕಾಂ' ವೈನೋದಿಕ ಪ್ರಸಂಗಗಳ ಮೂಲಕ ಬದುಕಿನ ಹಲವು ಸೂಕ್ಷ್ಮಗಳನ್ನು ಹೇಳುವ ಪ್ರಯತ್ನವಂತೆ. ಮಧ್ಯಮ ವರ್ಗದ ಕುಟುಂಬಗಳಲ್ಲಿ ವಿವಾಹ ಪ್ರಸ್ತಾಪದ ಸಮಯದಲ್ಲಿ ಗಂಡು–ಹೆಣ್ಣು ಮುಖಾಮುಖಿಯಾಗುವ ಸಂದರ್ಭಗಳಲ್ಲಿನ ಸ್ವಾರಸ್ಯವನ್ನು ರಾಕೇಶ್ ಚಿತ್ರದಲ್ಲಿ ತೋರಿಸುವ ಪ್ರಯತ್ನ ಮಾಡಿದ್ದಾರಂತೆ. ಮನರಂಜನೆಯ ಜೊತೆಗೆ ನೋಡುಗರನ್ನು ಯೋಚನೆಗೆ ಹಚ್ಚುವಂತೆ ಮಾಡುವಲ್ಲಿ ತಮ್ಮ ಚಿತ್ರದ ಯಶಸ್ಸಿದೆ ಎನ್ನುವುದು ಅವರ ನಂಬಿಕೆ. ಕಿರುತೆರೆಯ ಪರಿಚಿತ ಮುಖ ಶೀತಲ್ ಶೆಟ್ಟಿ ಚಿತ್ರದ ನಾಯಕಿ. ಚಿತ್ರರಸಿಕರು ತಮ್ಮನ್ನು ನಟಿಯಾಗಿ ಒಪ್ಪಿಕೊಳ್ಳುತ್ತಾರೆ ಎನ್ನುವ ನಂಬಿಕೆ ಅವರಿಗಿದೆ. ನೋಡೋಕೆ ಮತ್ತು ಕೊಂಡಾಡೋಕೆ ಚಿತ್ರದಲ್ಲಿ ಸಾಕಷ್ಟು ಸಂಗತಿಗಳಿವೆ ಎಂದು ಶೀತಲ್ ಹೇಳಿಕೊಂಡಿದ್ದಾರೆ. ಹಿರಿಯ ನಟ ಹರಿಣಿ ಅವರ ಮಗಳಾಗಿ ಸಿನಿಮಾದಲ್ಲಿ ಕಾಣಿಸಿಕೊಂಡಿರುವುದು ಕೂಡ ಅವರಿಗೆ ಖುಷಿ ಕೊಟ್ಟಿದೆ. ಬಹುಳ ದಿನಗಳ ನಂತರ ಮತ್ತೆ ನಟನೆಗೆ ತಮ್ಮನ್ನೊಡ್ಡಿಕೊಂಡಿರುವುದು ಹರಿಣಿ ಅವರಿಗೂ ಮಜಾ ಅನುಭವ ಎನ್ನಿಸಿದೆ. ಹರ್ಷವರ್ಧನ್‌ರಾಜ್ ಹಿನ್ನೆಲೆ ಸಂಗೀತ ಹಾಗೂ ಯೋಗಿ ಛಾಯಾಗ್ರಹಣ ಚಿತ್ರಕ್ಕಿದೆ. ಸೆ. 7ರಂದು ಸಿನಿಮಾ ತೆರೆ ಕಾಣುತ್ತಿದೆ.

